ದಕ್ಷಿಣ ಕನ್ನಡ ಜಿಲ್ಲೆಯ ಕಂದಾಯ ಪದ್ಧತಿ

2235 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ರಚಿಸಿದ ಅಕ್ರಮ ಸಾಗುವಳಿ ಭೂಮಿಯನ್ನು ಸಕ್ರಮಗೊಳಿಸುವ ಕಾನೂನಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಕಂದಾಯ ಪದ್ಧತಿಗಳಿಂದ ಭೂವಿತರಣೆಯ ಬಗ್ಗೆ ಇರುವ ತೊಂದರೆಗಳ ಬಗ್ಗೆ ಮನವಿಯೇನಾದರೂ ಸರ್ಕಾರ ಪರಿಶೀಲಿಸಿರುವುದೇ;

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವ್ಯವಸಾಯದ ಬದಿಯಲ್ಲಿಯೇ ಮನೆ ಕಟ್ಟಿಕೊಂಡಿರುವ ಕಾರಣ ಈ ಭೂಮಿಯನ್ನು ಸಕ್ರಮಗೊಳಿಸಲು ಜಿಲ್ಲೆಯ ಜನರ ಉಪಯೋಗಕ್ಕಾಗಿ ವಿಶೇಷ ತಿದ್ದುಪಡಿ ತರುವ ಆಲೋಚನೆಯೇನಾದರೂ ಸರ್ಕಾರಕ್ಕಿದೆಯೇ;

ಇ) ಜಿಲ್ಲೆಯಲ್ಲಿ ಪುರಸಭೆಗಳ ವ್ಯಾಪ್ತಿಯಲ್ಲಿ 10 ಕಿ.ಮೀ. ತನಕ ಅಕ್ರಮ ಸಕ್ರಮಗೊಳಿಸುವುದು ಅಸಾಧ್ಯವಾದರೆ ಜಿಲ್ಲೆಯ ಹೆಚ್ಚಿನ ಭೂಭಾಗದಲ್ಲಿ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸಲಾಗುವುದಿಲ್ಲವಾದ ಕಾರಣ ಸರ್ಕಾರ ಇದಕ್ಕೆ ತಿದ್ದುಪಡಿ ತರುವರೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಹೌದು, ಪರಿಶೀಲನೆಯಲ್ಲಿದೆ

ಆ) ಪರಿಶೀಲನೆಯಲ್ಲಿದೆ

ಇ) ಪರಿಶೀಲನೆಯಲ್ಲಿದೆ.

ವನ್ಯ ಮೃಗಗಳ ಹಾವಳಿಯಿಂದ ಆಸ್ತಿ ಪಾಸ್ತಿಗಳಿಗೆ ಉಂಟಾದ ನಷ್ಟ

2257 - ಶ್ರೀಮತಿ ಸುಮಾ ವಸಂತ (ವಿರಾಜಪೇಟೆ) : ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೆಗೆ ರಾಜ್ಯದಲ್ಲಿ ವನ್ಯ ಮೃಗಗಳ ಹಾವಳಿಯಿಂದ ಆಸ್ತಿ ಪಾಸ್ತಿಗಳಿಗೆ ಉಂಟಾದ ನಷ್ಟ ಎಷ್ಟು? (ಜಿಲ್ಲಾವಾರು ಮಾಹಿತಿಯನ್ನೊದಗಿಸುವುದು)

ಆ) ಈ ಬಗ್ಗೆ ಸರ್ಕಾರದವರು ಬಿಡುಗಡೆ ಮಾಡಿದ ಪರಿಹಾರ ಧನವೆಷ್ಟು? (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು)

ಶ್ರೀ ಇ.ಟಿ. ಶಂಬುನಾಥ (ಅರಣ್ಯ ರಾಜ್ಯ ಸಚಿವರು) :

ಅ) 1990-91ನೇ ಸಾಲಿನಲ್ಲಿ ಕಾಡು ಪ್ರಾಣಿಗಳಿಂದ ಉಂಟಾದ ನಷ್ಟದ ವಿವರವನ್ನು ಅಳವಡಿಸಲಾಗಿದೆ.

(ಅನುಬಂಧ -1)

ಆ) ವಿವರಗಳನ್ನು ಅನುಬಂಧ ಎರಡರಲ್ಲಿ ನೀಡಲಾಗಿದೆ.